

# ಬಾಳೆಗುಳಿ ಕ್ರಾಸ್

ಹತ್ತಿ, ಬೇಗ ಹತ್ತಿ, ಬಾಳೆಗುಳಿ ಕ್ರಾಸಿನಲ್ಲಿ ಇಳೀರಿ, ಅಲ್ಲಿಂದ ನಿಮಗೆ
ಬೇಕಾದ್ ಕಡೆ ಹೋಗ್ಲಿಕ್ಕೆ ಬೇಕಾದಷ್ಟ್ ಬಸ್ ಸಿಗ್ತದೆ
ಅಂತ ಹೇಳಿದವರ ಮಾತು ನಂಬಿ, ಸಿಕ್ಕ ಬಸ್ ಹಿಡಿದು
ಬಾಳೆಗುಳಿ ಕ್ರಾಸಲ್ಲಿ ಇಳಿದರೆ
ಖಲಾಸ್; ಬೇಕಾದ ಬಸ್ಸು ಒಂದೂ ಇಲ್ಲ.
ಬಂದರೂ ನಿಲ್ಲುವುದಿಲ್ಲ. ತಪ್ಪಿ ನಿಂತರೂ ನಮ್ಮದಲ್ಲ.
ಅಕಸ್ಮಾತ್ ದೇವರೇ ಕಳಿಸಿದಂತೆ ಬೇಕಾದ್ದೊಂದು ಬಂದು
ಸದ್ದಿಲ್ಲದೆ ತುಸು ದೂರವೆ ನಿಂತರೂ
ಒಳಗೆ ಕಾಲೂರಲೂ ಆಗದಷ್ಟು ಗರ್ದಿ, ಪ್ರಶ್ನೆ ಪತ್ರಿಕೆ ಮುಖಗಳು.
ಅಗೋಚರ ಕಂಡಕ್ಟರನ ಸೀಟಿ
ಐನ ಹೊತ್ತಿಗೆ ಕೊಕ್ಕರೆಯಂತೆ ಕಾಲು ಹಿಂತೆಗೆದುಕೊಂಡರೆ
ಬಚಾವ್

